ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಆದರೂ ಕೂಡ ಗದಗ, ಬೆಟಗೇರಿ ನೀರಿನ ಅವಶ್ಯಕತೆ ಬಹಳ ಮುಖ್ಯ ಯೆಂದು ಪರಿಗಣಿಸಿ ಇದನ್ನು ಬೋರ್ಡ್ ಯೋಜನೆ ಎಂದು ತೆಗೆದುಕೊಂಡು ಕಾರ್ಯಪ್ರಾರಂಭ ಮಾಡಲಾಗಿದೆ. ಬೋರ್ಡ್ ಯೋಜನೆ ಎಂದುತೆಗೆದುಕೊಂಡಿರುವುದರಿಂದ ದರ ಹೆಚ್ಚು ಆದರೂ ಮುನಿಸಿಪಾಲಿಟಿಯವರು ಕೊಡಲಿಕ್ಕೆ ಸಾಧ್ಯವಾಗದೇ ಇಷ್ಟರೂ, ಜೀವನವಿಮಾ ಇಲಾಖೆಯಿಂದ ಹಣ ದೊರಕುತ್ತದೆ 31-3-83ರಲ್ಲಿ 12 ಲಕ್ಷ ರೂಪಾಯಿ, 6-9-83 ರಲ್ಲಿ 14.5 ಲಕ್ಷ ರೂಪಾಯಿ, ಮತ್ತು 10-1-84 ರಲ್ಲಿ 8 ಲಕ್ಷ ರೂಪಾಯಿಕೊಡಲಾಗಿದೆ. ಪೈಪುಗಳನ್ನು ಹಾಕತಕ್ಕ ಕಾಮಗಾರಿ ಕೆಲಸ ನಡೆಯುತ್ತಿದೆ.

ಶ್ರೀ ಎ. ಜಿ. ದೊಡ್ಡಮೇಟಿ.--ಈ ಯೋಜನೆ ವಿಳಂಬ ಆಗಲಿಕ್ಕೆ ಕಾರಣ ಏನು? ಅದಕ್ಕೆ ಕಾರಣ ಕರ್ತರು ಯಾರು?

ಶ್ರೀ ಎಂ. ಚಂದ್ರಶೇಖರ್.--ಮೊಹಲು ಮಲಪ್ರಭಾದಿಂದ ನೀರನ್ನು ತರಬೇಕೆಂದು ಇತ್ತು. ಅನಂತರ ಆದನ್ನು ಕೈಬಿಟ್ಟು, ತುಂಗಭಧ್ರಾನ ದಿಯಿಂದ ನೀರನ್ನು ತರಬೇಕೆಂದು ಮಾಡಿದಾಗ ಒಂದು ಸಾವಿರ ಲೀಟರ್ ನೀರಿಗೆ 8-9 ರೂಪಾಯಿ ಆಗುತ್ತದೆಂದು ಪುರಸಭೆಯವರು ಆ ಹಣವನ್ನು ಕೊಡಲಿಕ್ಕೆ ಆಗುವುದಿಲ್ಲ ಎಂಪು ಹೇಳಿದಾಗ, ಆ ಯೋಜನೆಗೆ ಜೀವನವಿಮಾ ಕಾರ್ಪೂರೇಷನ್ ಸಾಲ ಕೊಡಲಿಕ್ಕೆ ಹಿಂದೆ ಹಾಕಿದರು ಆ ರೀತಿಯಿಂದ ವಿಳಂಬವಾಗಿದೆ.

ಶ್ರೀ ಎಂ. ಎಂ. ಜರತಾರ್‌ಗರ್,--ಬೋರ್ಡ್ ನೆಚ್ಚಕ್ಕ ಖರ್ಚಾಗುವುದನ್ನು ಕಡಿಮೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಚಂದ್ರಶೇಖರ್.--ಯಾವುದೇ ಯೋಜನೆ ತೆಗೆದುಕೊಳ್ಳಬೇಕಾದರೂ, ಆ ಇಲಾಖೆ ಬೋರ್ಡ್ ನೆಚ್ಚ ಆದಕ್ಕೆ ಸೇರಿಸಿ ಮಾಡಬೇಕಾಗುತ್ತದೆ. ಆಯಾಯ ಯೋಜನೆಗೇ ತಕ್ಕಂತೆ ಆ ಬಾಬ್ತು ಹಣ ಕೊಡಬೇಕಾಗುತ್ತದೆ.

ಚಿಂತಾಮಣಿ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುದ್ಧೀಕರಣ ಯೋಜನೆಯ ಬಗ್ಗೆ

317 (433) ಶ್ರೀ ಚೌಡರೆಡ್ಡಿ (ಚಿಂತಾಮಣಿ) ಮಾನ್ಯ ವಿದ್ಯುಶಕ್ತಿ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಪ್ರಶ್ನೆಗಳು :

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ಗ್ರಾಮಾಂತರ ವಿದ್ಯುದ್ಧೀಕರಣ ಯೋಜನೆ ಮಂಜೂರಾಗಿಹೆಯೇ; ಹಾಗಿದ್ದಲ್ಲಿ, ಯಾವಾಗ;

ಆ) ಈ ಯೋಜನೆ ಪ್ರಕಾರ ಎಷ್ಟು ಗ್ರಾಮಗಳಿಗೆ ಹಾಗೂ ಎಷ್ಟು ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ, ಸರಬರಾಜು ಮಾಡಲಾಗುವುದು (ಗ್ರಾಮವಾರು ಅಂಕ ಅಂಶಗಳನ್ನೊದಗಿಸುವುದು) ಹಾಗೂ ಇದಕ್ಕೆ ಮಂಜೂರಾಗಿರುವ ಮೊತ್ತವೆಷ್ಟು?

ಇ) ಈ ಯೋಜನೆಯನ್ನು ಪೂರೈಸಲು ವಾರ್ಡ್ ಯೂನಿಟ್ ಮತ್ತು ಸಿಬ್ಬಂದಿ ಹಾಗೂ ವಾಹನ ಸೌಕರ್ಯ ಬೇಕೆಂಬುದಾಗಿ ಚಿಂತಾಮಣಿಯ ವಿದ್ಯುಚ್ಛಕ್ತಿ ಇಲಾಖೆಯವರಿಂದ ಬೇಡಿಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವಾಗ?

ಶ್ರೀ ಜೆ. ಹೆಚ್. ಪಟೇಲ್ (ವಿದ್ಯುಚ್ಛಕ್ತಿ ಮತ್ತು ಅಬ್ಕಾರಿ ಮಂತ್ರಿಗಳು).—ಅ) ತಾ॥ 10-3-83 ರಲ್ಲಿ ಮಂಜೂರಾಗಿದೆ.

ಆ) 1) 25 ಗ್ರಾಮಗಳಿವೆ.

2) 600 ನೀರಾವರಿ ಪಂಪುಸೆಟ್ಟುಗಳು.

(ಅಂಕಅಂಶಗಳನ್ನು ಅನುಬಂಧದಲ್ಲಿ ಕೊಟ್ಟಿದೆ.)

3) 55.11 ಲಕ್ಷ ರೂಪಾಯಿಗಳು ಮಂಜೂರಾಗಿದೆ.

ಇ) ಬೇಡಿಕೆ ಬಂದಿದೆ.

1. ದಿನಾಂಕ. 6-5-83ರಲ್ಲಿ ವರ್ಕ್ಸ್ ಯೂನಿಟ್‌ಗಾಗಿ.

2. ದಿನಾಂಕ. 13-7-83ರಲ್ಲಿ ವಾಹನ (ಲಾರಿಗಾಗಿ)

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಅ ನು ಬ ಂ ಧ

ವಿಧಾನ ಸಭಾ ಸದಸ್ಯ ಶ್ರೀ ಜಗೌಡ ರೆಡ್ಡಿಯವರ ಚುಕ್ಕೆ ಗುರುತಿನ ಪ್ರಶ್ನೆ 433

ಕ್ರಮ ಸಂಖ್ಯೆ	ಯೋಜನೆಯಲ್ಲಿ ಸೇರಿರುವ ಗ್ರಾಮಗಳು	ಆ ಗ್ರಾಮಗಳಲ್ಲಿ ನಿರಾವರಿ ಪಂಪುಸೆಟ್ಟುಗಳ ಸಂಖ್ಯೆ
1.	ಚಿಕ್ಕಬೊಮ್ಮನಹಳ್ಳಿ	4
2.	ರಮಣಹಳ್ಳಿ	2
3.	ಜೋಡಿಬ್ರಹ್ಮನಹಳ್ಳಿ	5
4.	ಗೌರಿಗಡೆ	3
5.	ಜಂಗಮಪುರ	14
6.	ಜಪೂರ	5
7	ಯಶವಂತಪುರ	7
8.	ಕೆತನಾಯಕನಹಳ್ಳಿ	6
9.	ಜಲದೇನಹಳ್ಳಿ	10
10.	ವರನಾಥಹಳ್ಳಿ	5
11.	ತಮ್ಮೇಪಾಳ್ಯ	10
12.	ಚಿಕ್ಕನುಸಿವಂಗಳ	11
13.	ಗೌಸೀಪಾಳ್ಯ	10
14	ಕೊಡಗಿಹಳ್ಳಿ	15
15	ಮುಕ್ತಕೊಂಡಹಳ್ಳಿ	12
16.	ಕೆರಳಹಳ್ಳಿ	7
17.	ಬಂಡಕೋಟಾ	5
18.	ಮೈಯಕಾಪೋತಲಹಳ್ಳಿ	5
19.	ತಿಪ್ಪಿನಹಳ್ಳಿ	5
20.	ಪುಳಿಗೊಂಡಲಹಳ್ಳಿ	10
21.	ಯೆರಕೋಟಿ	5
22.	ಬ್ಯಾನಹಳ್ಳಿ	20
23	ಬಾರಲಹಳ್ಳಿ	10
24.	ಉಪ್ಪರಹಳ್ಳಿ	2
25.	ಮೆಸಲಹಳ್ಳಿ (ಉಪಗ್ರಾಮ)	7
		195

ಉಳಿದ 405 ಪಂಪುಸೆಟ್ಟುಗಳನ್ನು ತಾಲ್ಲೂಕಿನ ಉಳಿದ ಗ್ರಾಮಗಳಲ್ಲಿನ ಗ್ರಾಹಕರ ಬೇಡಿಕೆ ಮೇರೆಗೆ ಕೊಡಲಾಗುವುದು.

ಸರ್ಕಾರಿ ನೌಕರರಾಗಿ ಪರಿಗಣಿಸಲ್ಪಟ್ಟ ಎ. ಪಿ. ಎಂ. ಸಿ. ನೌಕರರಿಗೆ ನಿವೃತ್ತಿವೇತನ ಸೌಲಭ್ಯ

318 (706) ಶ್ರೀ ಕೆ. ಚಿನ್ನಬಸವನಗೌಡ (ಕೊಡ್ಲಗಿ) ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವ್ಯವಸಾಯೋತ್ಪನ್ನ ವ್ಯಾಪಾರ ಸಮಿತಿಗಳ ನೌಕರರು ಸರ್ಕಾರಿ ನೌಕರರೆಂದು ಸರ್ಕಾರಿ ಆಜ್ಞೆ ದಿನಾಂಕ 1-3-82 ರಲ್ಲಿ ಪರಿವರ್ತಿತರಾಗಿ ಈಗಾಗಲೇ 1 ವರ್ಷ 10 ತಿಂಗಳುಗಳು ಗತಿಸಿದಾಗ್ಯೂ ಅವರಿಗೆ ನಿವೃತ್ತಿ ಸೌಲಭ್ಯಗಳಾದ ನಿವೃತ್ತಿ ವೇತನ ಮತ್ತು ನಿವೃತ್ತಿ ಉಪದಾನಗಳನ್ನು ಕೊಡಲು ಮಿತಿ ಮೀರಿದ ವಿಳಂಬವಾಗಿದೆ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೆ ;